ಬೆವಿಕಂ

BESCOM

# ಬೆಂಗಳೂರು ವಿದ್ಯುತ್ ಕಂಪನಿ ನಿಯಮಿತ

*(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)*

ಸಂಖ್ಯೆ : ಬೆ.ವಿ.ಕಂ/ಬಿಸಿ-51/2015-16/ CYS-58
ಲಗತು :

ಪ್ರಧಾನ ವ್ಯವಸ್ಥಾಪಕರು (ವಿ),
ಡಿ.ಎಸ್.ಎಂ, ನಿಗಮ ಕಾರ್ಯಾಲಯ,
ಬೆವಿಕಂ, ಕೆ.ಆರ್.ವೃತ್ತ,
ಬೆಂಗಳೂರು – 560 001.
ದಿನಾಂಕ: 23.12.2015

## ಸುತ್ತೋಲೆ

**ವಿಷಯ:** ಕಟ್ಟಡಗಳ ಮೇಲ್ಛಾವಣಿಗಳ ಮೇಲೆ ಸೌರ ಶಕ್ತಿ ಉತ್ಪಾದನಾ ಘಟಕಗಳನ್ನು ಪ್ರೋತ್ಸಾಹಿಸುವ ಕುರಿತು.

**ಉಲ್ಲೇಖ** : 1. ಸರ್ಕಾರದ ಉಪ ಕಾರ್ಯದರ್ಶಿ ಇವರ ಪತ್ರ ಸಂಖ್ಯೆ: ಇಎನ್ 70 ವಿಎಸ್‌ಸಿ 2015, ದಿನಾಂಕ:10.12.2015

2. ಮಾನ್ಯ ತಾಂತ್ರಿಕ ನಿರ್ದೇಶಕರ ಪಿ.ಎಲ್.ಓ ಸಂಖ್ಯೆ:6363, ಪ್ಯಾರ ಸಂಖ್ಯೆ:03

******

**ಪ್ರಸ್ತಾವನೆ:**

ಕರ್ನಾಟಕ ಸರ್ಕಾರವು ಕಟ್ಟಡಗಳ ಮೇಲ್ಛಾವಣಿಗಳ ಮೇಲೆ ಸೌರಶಕ್ತಿ ಉತ್ಪಾದನಾ ಘಟಕಗಳನ್ನು ಪ್ರೋತ್ಸಾಹಿಸಲು ಸದರಿ ಚಾಲ್ತಿಯಲ್ಲಿರುವ ಪ್ರಕ್ರಿಯೆಗಳನ್ನು ಮತ್ತಷ್ಟು ಸರಳಿಗೊಳಿಸಲು ಉಲ್ಲೇಖ ರನ್ವಯ ಸುತ್ತೋಲೆಯನ್ನು ಹೊರಡಿಸಿದ್ದು, ಅವುಗಳ ಅನುಷ್ಠಾನಗೊಳಿಸಲು ಈ ಕೆಳಗಿನ ಸುತ್ತೋಲೆಯನ್ನು ಹೊರಡಿಸಲು ನಿರ್ದೇಶಿತನಾಗಿದ್ದೇನೆ.

1. ಸೌರ ನೀತಿ 2014-21 ರನ್ವಯ ಸೋಲಾರ್ ವಿದ್ಯುತ್ ಉತ್ಪಾದನೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಹಾಲಿ ವಿದ್ಯುತ್ ಸಂಪರ್ಕ ಪಡೆದಿರುವ ಕಟ್ಟಡಗಳ ಮೇಲ್ಛಾವಣಿಗಳಲ್ಲಿ ಸೋಲಾರ್ ಪ್ಯಾನಲ್‌ಗಳನ್ನು ಅಳವಡಿಸಲು ನೆಟ್ ಮೀಟರಿಂಗ್ ವ್ಯವಸ್ಥೆಯಡಿಯಲ್ಲಿ ಬೆ.ವಿ.ಕಂ ಗ್ರಾಹಕರಿಂದ ಅರ್ಜಿಗಳನ್ನು ಸ್ವೀಕರಿಸುತ್ತಿದೆ.
2. ಸದರಿ ಮೇಲ್ಛಾವಣಿ ವಿದ್ಯುತ್ ಉತ್ಪಾದನೆಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ನಿಗಧಿಪಡಿಸಿರುವ ವಿದ್ಯುತ್ ದರವನ್ನು ಪಾವತಿಸಲಾಗುತ್ತಿದೆ.
3. ಆದರೆ ಹೊಸದಾಗಿ ನಿರ್ಮಿಸುತ್ತಿರುವ ಕಟ್ಟಡಗಳಲ್ಲಿ ಮೇಲ್ಛಾವಣಿ ಸೌರ ಘಟಕಗಳ ಅಳವಡಿಕೆಯನ್ನು ಕಟ್ಟಡದ ನಿರ್ಮಾಣದ ಜೊತೆಯಲ್ಲಿಯೇ ನಿರ್ವಹಿಸಿದ್ದಲ್ಲಿ ಮೇಲ್ಛಾವಣಿ ಸೌರ ಫಲಕಗಳನ್ನು ಕಟ್ಟಡ ವಿನ್ಯಾಸಕ್ಕನುಗುಣವಾಗಿ ಸುಭದ್ರ ರೀತಿಯಲ್ಲಿ ಅಳವಡಿಸಲು ಅನುಕೂಲವಾಗುವುದು.
4. ಈ ಹಿನ್ನೆಲೆಯಲ್ಲಿ ಗ್ರಾಹಕರು ಹೊಸ ಕಟ್ಟಡದ ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಸಲ್ಲಿಸುವ ಸಮಯದಲ್ಲಿಯೇ ಮೇಲ್ಛಾವಣಿ ಸೌರ ಫಲಕಗಳ ಅಳವಡಿಕೆಗೂ ಸಹ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಆದರೆ ವಿದ್ಯುತ್ ಒಪ್ಪಂದ ಕರಾರು ಪತ್ರವನ್ನು ಚಾಲಿಯಲ್ಲಿರುವ ಕೆ.ಇ.ಆರ್.ಸಿ ನಿಗಧಿತ ವಿದ್ಯುತ್ ದರದಂತೆ ಒಪ್ಪಂದ ಮಾಡಿಕೊಳ್ಳಬೇಕು.
5. ಈ ಕರಾರು ಪತ್ರದ ಅವಧಿಯು ಒಂದು ವರ್ಷಕ್ಕೆ ಸೀಮಿತವಾಗಿದ್ದು, ಒಂದು ವರ್ಷದ ಅವಧಿಯೊಳಗೆ ಕಟ್ಟಡ ನಿರ್ಮಾಣ ಪೂರ್ಣಗೊಂಡು ವಿದ್ಯುತ್ ಸಂಪರ್ಕ ಪಡೆಯಬೇಕು. ಇಲ್ಲವಾದಲ್ಲಿ ಆನಂತರ ಚಾಲ್ತಿಯಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದವರ ನಿಗಧಿತ ವಿದ್ಯುತ್ ದರವನ್ನು ನಿಗಧಿಪಡಿಸಬೇಕು.

**ಮೇಲಿನ ಸೂಚನೆಗಳನ್ನು ಅನುಷ್ಠನಗೊಳಿಸಲು ಎಲ್ಲಾ ಬೆ.ವಿ.ಕಂ ಅಧಿಕಾರಿಗಳು ತಕ್ಷಣದಿಂದಲೇ ಸೂಕ್ತಕ್ರಮಗಳನ್ನು ಕೈಗೊಳ್ಳಲು ಸೂಚಿಸುವಂತೆ ನಿರ್ದೇಶಿತನಾಗಿದ್ದೇನೆ.**

(ಸಿ.ನಟರಾಜ)
ಪ್ರಧಾನ ವ್ಯವಸ್ಥಾಪಕರು(ವಿ)
ಡಿ.ಎಸ್.ಎಂ, ಬೆವಿಕಂ

ಪ್ರತಿಯನ್ನು ಗೌರವಪೂರ್ವಕ ಅವಗಾಹನೆ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ:

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ವಿ), (ನಿಗಮ ವ್ಯವಹಾರಗಳು), ನಿಗಮ ಕಾರ್ಯಾಲಯ, ಬೆವಿಕಂ, ಬೆಂಗಳೂರು.
2. ಮುಖ್ಯ ಇಂಜಿನಿಯರ್(ವಿ),ಬೆಂ.ಮ.ಕ್ಷೇ.ವ/ಬೆಂ.ಗ್ರಾ.ವ/ಚಿತ್ರದುರ್ಗ ವಲಯಗಳು, ಬೆವಿಕಂ, ಬೆಂಗಳೂರು.

ಪ್ರತಿಯನ್ನು ಶುಭೇಚ್ಛೆಗಳೊಂದಿಗೆ ಅವಗಹಾನೆ ಹಾಗೂ ಕ್ರಮಕ್ಕಾಗಿ ಕಳುಹಿಸಿದೆ:

3. ಎಲ್ಲಾ ಪ್ರಧಾನ ವ್ಯವಸ್ಥಾಪಕರು(ವಿ), ನಿಗಮ ಕಾರ್ಯಲಯ, ಬೆವಿಕಂ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತಗಳು, ಬೆವಿಕಂ

ಪ್ರತಿಯನ್ನು ಅಗತ್ಯಕ್ರಮಕ್ಕಾಗಿ ಕಳುಹಿಸಿದೆ:

5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತಗಳು, ಬೆವಿಕಂ
6. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾರ್ಯ ಮತ್ತು ಪಾಲನಾ ವೃತ್ತಗಳು, ಬೆವಿಕಂ
7. ಆಪ್ತ ಕಾರ್ಯದರ್ಶಿಗಳು ವ್ಯ.ನಿ/ನಿ(ತಾಂ) ರವರ ಮಾಹಿತಿ ಹಾಗೂ ವ್ಯ.ನಿ/ನಿ(ತಾಂ) ರವರ ಗಮನಕ್ಕೆ ತರಲು ಕೋರಿದೆ.